# ಜಿಲ್ಲಾಧಿಕಾರಿಗಳ ನ್ಯಾಯಾಲಯ, ಕೋಲಾರ ಜಿಲ್ಲೆ, ಕೋಲಾರ

ದಿನಾಂಕ:17/08/2016

**ಪ್ರಕರಣ ಸಂಖ್ಯೆ: ಆರ್‌ಎ. 25/2012-13**

ಉಪಸ್ಥಿತರು:ಶ್ರೀ.ಡಾ॥ ಕೆ.ವಿ.ತ್ರಿಲೋಕ್ ಚಂದ್ರ ಭಾ.ಆ.ಸೇ.,
ಜಿಲ್ಲಾಧಿಕಾರಿಗಳು,
ಕೋಲಾರ ಜಿಲ್ಲೆ.

ಮೇಲ್ಮನವಿದಾರರು — ವಿರುದ್ಧ — ಎದುರುದಾರರು

1. ಅಶ್ವತ್ಥನಾರಾಯಣ ಬಿನ್ ಲೇ. ಸುಬ್ಬಯ್ಯ
2. ಶ್ರೀನಿವಾಸಮೂರ್ತಿ ಬಿನ್ ಲೇ. ಸುಬ್ಬಯ್ಯ
3. ರಾಜಗೋಪಾಲ ಬಿನ್ ಲೇ. ಸುಬ್ಬಯ್ಯ
4. *ಸಿ.ಎಸ್.ಓಬಯ್ಯ ಪವತಿ ಇವರ ವಾಸರುದಾರರು*
   4ಎ. ವೆಂಕಟಲಕ್ಷ್ಮಮ್ಮ ಕೋಂ ಸಿ.ಎಸ್.ಓಬಯ್ಯ
   4ಬಿ. ಸಿ.ಓ.ಜಯಶ್ರೀ ಬಿನ್ ಸಿ.ಎಸ್.ಓಬಯ್ಯ
   4ಸಿ. ಸಿ.ಓ.ಮಾಲತಿ ಬಿನ್ ಸಿ.ಎಸ್.ಓಬಯ್ಯ
   4ಡಿ. ಸಿ.ಓ.ಮಂಜುನಾಥ ಬಿನ್ ಸಿ.ಎಸ್.ಓಬಯ್ಯ
   4ಇ. ಸಿ.ಓ.ಗೀತಾಂಜಲಿ ಬಿನ್ ಸಿ.ಎಸ್.ಓಬಯ್ಯ
5. *ಸಿ.ಎಸ್.ವೆಂಕಟಾಚಲಪತಿ ಪವತಿ ಇವರ ವಾರಸುದಾರರ*
   5ಎ. ಸಿ.ವಿ.ಲಲಿತ ಬಿನ್ ಸಿ.ಎಸ್.ವೆಂಕಟಾಚಲಪತಿ
   5ಬಿ. ಸಿ.ವಿ.ಮಂಜುಳ ಬಿನ್ ಸಿ.ಎಸ್.ವೆಂಕಟಾಚಲಪತಿ
   5ಸಿ. ಸಿ.ವಿ.ವೇದ ಬಿನ್ ಸಿ.ಎಸ್.ವೆಂಕಟಾಚಲಪತಿ
   5ಡಿ. ಸಿ.ವಿ.ಹರಣಿ ಬಿನ್ ಸಿ.ಎಸ್.ವೆಂಕಟಾಚಲಪತಿ

ಎಲ್ಲರ ವಾಸ- ಬಲಜಿಗರ ಬೀದಿ,
ಕಠಾರಿಪಾಳ್ಯ, ಕೋಲಾರ ಟೌನ್.
( ಶ್ರೀ ಕೆ.ಎನ್.ಚಲಪತಿ
-ವಕೀಲರು ರವರಿಂದ )

3. ಸಹಾಯಕ ಕಮೀಷನರ್
   ಕೋಲಾರ ಉಪವಿಭಾಗ
4. ತಹಶೀಲ್ದಾರ್,
   ಕೋಲಾರ ತಾಲ್ಲೂಕು.
5. ಸಿ.ಆರ್.ಎನ್. ಪ್ರಸಾದ್
   ಬಿನ್ ಸಿ.ಎಸ್.ರಂಗಣ್ಣ
   ಗೋಕುಲ್ ಕಾಲೇಜ್ ಹತ್ತಿತ
   ಕೋಲಾರ ಟೌನ್.
6. ಡಿ.ಎಸ್.ಸುಬ್ರಮಣಿ
   ಬಿನ್ ಡಿ.ಎಲ್.ಶ್ರೀರಾಮುಲು
   ಎನ್.ಜಿ.ಓ. ಬಡಾವಣೆ,
   ಗೋಕುಲ್ ಕಾಲೇಜ್ ಹತ್ತಿತ
   ಕೋಲಾರ ಟೌನ್.

( ಶ್ರೀ ಎಂ.ಎಸ್.ಮಂಜುನಾಥ್
-ವಕೀಲರು ರವರಿಂದ )

ವಿಷಯ: ಸಹಾಯಕ ಕಮೀಷನರ್ ಕೋಲಾರ ಉಪವಿಭಾಗ, ಕೋಲಾರ ರವರ ಕ್ರಮಾಂಕ: ಆರ್.ಎ.165/2009-10 ದಿನಾಂಕ: 03/11/2012. ರ ಆದೇಶದ ವಿರುದ್ಧ ಸಲ್ಲಿಸಿರುವ ಮೇಲ್ಮನವಿ.

0-0-0

## ಪ್ರಸ್ತಾವನೆ.

ಈ ಮೇಲ್ಮನವಿ ಅರ್ಜಿಯನ್ನು ಕರ್ನಾಟಕ ಭೂ ಕಂದಾಯ ಅಧಿನಿಯಮ 1964 ಕಲಂ 50 ರಂತೆ ಸಲ್ಲಿಸಿರುತ್ತಾರೆ.

## ಪ್ರಕರಣದ ಸಂಕ್ಷಿಪ್ತ ವಿವರ,

ಕೋಲಾರ ತಾಲ್ಲೂಕು, ಕಸಬಾ ಹೋಬಳಿ, ಹಾರೋಹಳ್ಳಿ ಗ್ರಾಮದ ಸ.ನಂ. 59/1 ರಲ್ಲಿನ 3-04 ಎಕರೆ ಜಮೀನಿಗೆ ಸಂಬಂಧಿಸಿದಂತೆ ತಹಶೀಲ್ದಾರ್, ಕೋಲಾರ ತಾಲ್ಲೂಕು ರವರ ಆದೇಶ ಕ್ರಮಾಂಕ: ಆರ್.ಆರ್.ಟಿ. (ಡಿಸ್)4/2006-07 ದಿನಾಂಕ:29/07/2009 ರ ವಿರುದ್ಧ ಅಶ್ವತ್ಥನಾರಾಯಣ ಬಿನ್ ಲೇಟ್ ಸುಬ್ಬಯ್ಯ, ಶ್ರೀನಿವಾಸಮೂರ್ತಿ ಬಿನ್ ಲೇಟ್ ಸುಬ್ಬಯ್ಯ, ರಾಜಗೋಪಾಲ ಬಿನ್ ಲೇಟ್ ಸುಬ್ಬಯ್ಯ ಮತ್ತು ದ್ವಾರಕನಾಥ ಬಿನ್ ಲೇಟ್ ಸುಬ್ಬಯ್ಯ ಎಂಬುವರು ಸಹಾಯಕ ಕಮೀಷನರ್, ಕೋಲಾರ ಉಪವಿಭಾಗ ರವರಲ್ಲಿ ಮೇಲ್ಮನವಿ ಸಲ್ಲಿಸಿರುತ್ತಾರೆ. ವಿಚಾರಣೆ ನಂತರ ಸಹಾಯಕ ಕಮೀಷನರ್ ರವರು ಪ್ರಕರಣ ಸಂಖ್ಯೆ:.ಆರ್.ಎ 165/2009-10 ದಿನಾಂಕ: 03/11/2012 ರಂದು ಹೊರಡಿಸಿದ ಆದೇಶದಲ್ಲಿ ಮೇಲ್ಮನವಿಯನ್ನು ವಜಾಕರಿಸಿರುತ್ತಾರೆ. ಸಹಾಯಕ ಕಮೀಷನರ್ ರವರ ಈ ಆದೇಶದಿಂದ ಬಾದಿತರಾದ ಮೇಲ್ಮನವಿದಾರರು ಈ ನ್ಯಾಯಾಲಯದಲ್ಲಿ ಪ್ರಸ್ತುತ ಮೇಲ್ಮನವಿ ಸಲ್ಲಿಸಿರುತ್ತಾರೆ. ಮೇಲ್ಮನವಿ ಅರ್ಜಿಯನ್ನು ವಿಚಾರಣೆಗಾಗಿ ದಾಖಲಿಸಿಕೊಂಡು ಉಭಯತ್ರರಿಗೂ ನೋಟೀಸ್ ನೀಡಲಾಯ್ತು. ಉಭಯತ್ರರಿಗೂ ಸಾಕಷ್ಟು ಕಾಲಾವಕಾಶ ನೀಡಿ ವಿಚಾರಣೆ ಮಾಡಿದೆ.

...2